(ಶ್ರೀ ಎಚ್. ಎಂ. ಚನ್ನಬಸಪ್ಪ)

ತಯಾರು ಮಾಡರಾಯಿತು. ಆಗ್ಗೆ 2 ಸಾವಿರ ಎಕರೆಗೆ ನೀರು ಒದಗುವಂತೆ ಸ್ಕೀಮ್ ಪ್ರಪೋಸ್ ಮಾಡಿದ್ದರು. ಇದಕ್ಕಿಂತ ಇನ್ನೂ 20 ಮೈಲಿ ಕೆಳಮಟ್ಟದಲ್ಲಿ ಕಟ್ಟಿದರೆ, ಹೆಚ್ಚಿನ ಜಮೀನು ವ್ಯವ ಸಾಯ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ಕಂಡುಬಂದಮೇಲೆ ಪುನರ್‌ಪರಿಶೀಲನೆ ಮಾಡಿ 20 ಮೈಲಿ ಕೆಳಗೆ ಕೆರೆ ಕಟ್ಟಲು ಒಂದು ಅಂದಾಜು ತಯಾರು ಮಾಡಿದೆ. ಇದರ ಬಗ್ಗೆ ಎಲ್ಲಾ ಮಾಹಿತಿಗಳು ಒದಗಿವೆ. ಕೃಷ್ಣಾನದಿ ವಿವಾದದ ಬಗ್ಗೆ ತೀರ್ಪು ಬಂದಮೇಲೆ, ಇದನ್ನು ಶೀಘ್ರವಾಗಿ ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡುತ್ತೇವೆ.

Construction of Vijayanagar Anecut in Siruguppa Taluk

184. **Sri B. E. RAMAIAH** (Siruguppa).—

Will the Minister of State for Major Irrigation be pleased to state:—

(*a*) whether there is a proposal to construct Vijayanagar anicut near Kenchanagudda in Siruguppa Taluk ;

(*b*) if so, whether the plans and estimates are ready ?

(*c*) when this anecut is expected to be ready ?

Sri H. N. NANJE GOWDA (Minister of State for Major Irrigation).—

(*a*) A scheme has been investigated.

(*b*) Plans and estimates have been prepared.

(*c*) The matter is under examination.

ಶ್ರೀ ಬಿ. ಇ. ರಾಮಯ್ಯ.—ನಕ್ಷೆ ಹಾಗೂ ಅಂದಾಜುಗಳನ್ನು ತಯಾರಿಸರಾಗಿದೆ ಎಂದು ಹೇಳಿದ್ದೀರಿ. ಇದರ ಅಂದಾಜು ವೆಚ್ಚ ಎಷ್ಟಾಗಬಹುದು ಎಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ಇದಕ್ಕೆ 1965ನೇ ಇಸವಿಯಲ್ಲಿ ರೀ-ಮಾಡಲಿಂಗ್ ಮತ್ತು ಚಾನಲ್ ಕೆಲಸವನ್ನು ಸುಮಾರು 10 ಲಕ್ಷದ 54 ಸಾವಿರ ರೂಪಾಯಿಗಳ ಖರ್ಚಿನಲ್ಲಿ ಮಾಡಿ ಮುಗಿಸ ರಾಗಿದೆ, ಹೊಸದಾಗಿ ಆಣೆಕಟ್ಟನ್ನು ಕಟ್ಟುವ ಬಗ್ಗೆ ಸುಮಾರು 55 ಲಕ್ಷ ರೂಪಾಯಿಗಳ ಅಂದಾಜನ್ನು ತಯಾರು ಮಾಡರಾಗಿದೆ. ಆದರೆ ಈ ಭಾಗದಲ್ಲಿ ಈಗಾಗಲೇ ಸುಮಾರು 12 ಆಣೆಕಟ್ಟುಗಳಿರುವುದ ರಿಂದ, ಈ ಆಣೆಕಟ್ಟನ್ನು ಸಹ ಕಟ್ಟುವುದರಿಂದ ಹೆಚ್ಚಿನ ಜಮೀನಿಗೆ ನೀರಾವರಿಯಾಗುವುದಿಲ್ಲ. ಮತ್ತು ಇರತಕ್ಕಂಥ ನಾಲೆಗಳಿಗೆ ತುಂಗಭದ್ರಾ ಯೋಜನೆಯ ಸೀಪೇಜ್ ವಾಟರ್ ಬರುವ ಕಾರಣದಿಂದ ಸರ್ಕಾರದವರು ಇವುಗಳಿಗಾಗಿ ವಿಪರೀತ ಹಣವನ್ನು ಖರ್ಚುಮಾಡಿ ಹೊಸದಾಗಿ ಕಟ್ಟುವುದನ್ನು ಕೈಬಿಡಬೇಕೆಂದು ತೀರ್ಮಾನ ಮಾಡಿದ್ದಾರೆ.

ಶ್ರೀ ಬಿ. ಇ. ರಾಮಯ್ಯ.—ಇದು ವಿಜಯನಗರದ ಅರಸರು ಕಟ್ಟಿಸಿದ್ದು. ಈಗ ಬಹಳ ಶಿಥಿಲ ವಾಗಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎನ್. ನಂಜೇಗೌಡ.—ಈಗ ಹೊಸದಾಗಿ ಕಟ್ಟುವುದಕ್ಕಾಗುವುದಿಲ್ಲ. ಇರುವುದನ್ನು ರಿಪೇರಿ ಮಾಡಿಸಲು ಸೂಕ್ತ ಕಾರ್ಯಕ್ರಮ ಕೈಕೊಳ್ಳರಾಗುತ್ತದೆ.

ಶ್ರೀ ಬಿ. ಇ. ರಾಮಯ್ಯ.—55 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಹೊಸದಾಗಿ ಕಟ್ಟಿಸು ವುದು ಶಕ್ಯವಿಲ್ಲ ಎಂಬುದಾಗಿ ಚೆಕ್ನಿಕಲ್ ಒಪೀನಿಯನ್ ಬಂದಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎನ್. ನಂಜೇಗೌಡ.—ನಾನು ಮೊದಲೇ ಹೇಳಿದ ಹಾಗೆ ಹೊಸದಾಗಿ 55 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಕಟ್ಟಿಸುವ ಬದಲು ಸಣ್ಣಪುಟ್ಟ ರಿಪೇರಿ ಮಾಡಿಸುವುದು ಇದ್ದರೆ ಮಾಡಿಸುತ್ತೇವೆ. ಏಕೆಂದರೆ ಈ ಅಣೆಕಟ್ಟಿನಿಂದ ನೀರಾವರಿಯಾಗುವುದು ಕೇವಲ 1800 ಎಕರೆಗಳು ಮಾತ್ರ.

ಶ್ರೀ ಬಿ. ಇ. ರಾಮಯ್ಯ.—ಈಗ ರಿಪೇರಿ ಮಾಡಲು ಶಕ್ಯವಿಲ್ಲದಷ್ಟು ನೀರೆರ್ಲಾ ಸೋರಿ ಹೋಗಿ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎನ್. ನಂಜೇಗೌಡ.—ಸಣ್ಣಪುಟ್ಟ ರಿಪೇರಿ ಮಾಡಿಸುವುದಕ್ಕೆ ಕಾರ್ಯಕ್ರಮ ಕೈಕೊಳ್ಳುತ್ತೇವೆಂದು ಈಗಾಗಲೇ ಹೇಳಿದ್ದೇನೆ.

Railway Line from Wadi to Gadag

188. **Sri RAJA PID NAIK** (Shorapur).—

Will the Minister for Public Works and Electricity be pleased to state :—

(*a*) whether the Government is aware of the proposal of the Ministry of Railways. Union Government to lay the Railway line from Wadi to Gadag ;

(*b*) if so, the stage at which the proposal stands at present and whether the Government is pursuing the proposal ?

Sri H. M. CHANNABASAPPA (Minister for Public Works and Electricity).—

(*a*) No.

(*b*) Does not arise in view of (*a*) above.

Sri RAJA PID NAIK.—Whether the Government is aware that the previous Government has recommended to the Central Government for the construction of this railway line and whether any reply has been received from the Central Government in that behalf ?

Sri H. M. CHANNABASAPPA.—As given in the answer, there is no proposal. No survey is done for laying out a railway line between Wadi and Gadag.

Sri BAPU GOWDA.—Whether a survey had been conducted by the then Hyderabad Government from Wadi to Gadag ?

Sri H. M. CHANNABASAPPA.—Not that I know of.

Sri D. B. KALMANKAR.—Whether the Government will recommend to the Central Government the laying of a railway line from Wadi to Gadag ?

Sri H. M. CHANNABASAPPA.—That will be examined on merits and needful action taken.

Sri BAPU GOWDA RAYAPPA.—Is it not a fact that the Veerendra Patil Government has recommended to Central Government to include this in the Fourth Plan ?